**ಓ.ಎಸ್ ನಂ. 17 /2022** **ಡಿ.ಡಬ್ಲ್ಯೂ-1(ಸುರೇಶ್ )**

**ಸಾಕ್ಷಿಯನ್ನು ದಿನಾಂಕಃ 23.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಂ ಎಸ್ ಎಂ ವಕೀಲರಿಂದಃ**

_

ನಾನು ಎಂ ಎ ಓದಿರುತ್ತೇನೆ. ನನಗೆ ಕನ್ನಡದಲ್ಲಿ ಓದಲು ಬರೆಯಲು ಬರುತ್ತದೆ. ನನ್ನ ಮುಖ್ಯ ಸಾಕ್ಷ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯ ನನಗೆ ತಿಳಿದಿರುತ್ತದೆ. ಅದೇ ರೀತಿ ನನ್ನ ತಕರಾರಿನಲ್ಲಿ ಏನು ಬರೆದಿರುತ್ತದೆ ಎಂದು ನನಗೆ ತಿಳಿದಿರುತ್ತದೆ. ವಕೀಲರು ನಾನು ನೀಡಿದ ಮಾಹಿತಿಯಂತೆ ಮತ್ತು ದಾಖಲಾತಿಗಳನ್ನು ನೋಡಿ ತಕರಾರನ್ನು ತಯಾರಿಸಿರುತ್ತಾರೆ. ನಾನು ದಾವಾಸ್ತಿಯನ್ನು ಜನವರಿ 2010 ರಂದು ಖರೀದಿಸಿರುತ್ತೇನೆ ಸರಿಯಾದ ದಿನಾಂಕ ನನಗೆ ನೆನಪಿರುವುದಿಲ್ಲ. ಸದರಿ ದಾಖಲಾತಿಯ ನೊಂದಾಯಿತ ದಸ್ತಾವೇಜಿನ ಸಂಖ್ಯೆ ನನಗೆ ತಿಳಿದಿರುವುದಿಲ್ಲ. ಸಾಕ್ಷಿಯು ಮಂದುವರಿದು ಅದು ಕ್ರಯಪತ್ರದಲ್ಲೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಆ ದಾಖಲಾತಿಯ ನೊಂದಣಿ ಸಂಖ್ಯೆಯನ್ನು ನಮೂದಿಸಲಾಗಿಸಲಾಗಿರುತ್ತದೊ ಇಲ್ಲವೊ ಎಂದು ನಮ್ಮ ವಕೀಲರನ್ನು ಕೇಳಿ ಹೇಳಬೇಕಾಗುತ್ತದೆ.

ದಾವಾ ಐಟಂ ನಂ 1 ರ ಆಸ್ತಿಯನ್ನು ಶಿವರಾಜು, ಶಿವನಂಜು, ನಂಜಮ್ಮ ಮತ್ತು ಇತರರು ಇರುತ್ತಾರೆ ಅವರ ಹೆಸರು ಈಗ ನೆನಪಾಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿಯವರಲ್ಲಿ ದಾವಾ ಐಟಂ 1 ರ ಆಸ್ತಿಯು ಪಿತ್ರಾರ್ಜಿತವಾಗಿ ಬಂದಿರುತ್ತದೆ. ಅವರಿಗೆ ಪಿತ್ರಾರ್ಜಿತವಾಗಿ ಬಂದಿರುವ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ದಾಖಲಾತಿಗಳು

ಎಂದರೆ ಪಹಣಿ ಪತ್ರಿಕೆಗಳು, ಎಂ ಆರ್ ಗಳು, ಸ್ಕೆಚ್ಚುಗಳನ್ನು ಸಲ್ಲಿಸಿರುತ್ತೇನೆ. ನಾನು ಹಾಜಪಡಿಸಿದ ದಾಖಲಾತಿಗಳ ಮೂಲ ಸ. ನಂ 82 ಆಗಿರುತ್ತದೆ. ಸದರಿ ಜಮೀನು ಈಗ ಪೋಡಾಗಿರುತ್ತದೆ. ಪೋಡ್ ಆದ ಸರ್ವೆ ನಂಬರುಗಳು ನನಗೆ ತಿಳಿದಿರುತ್ತದೆ. ಒಟ್ಟು 6 ಪೋಡುಗಳಾಗಿರುತ್ತವೆ. ಸಾಕ್ಷಿಗೆ ಸದರಿ ಜಮೀನನ್ನು ಖರೀದಿಸುವ ಸಮಯದಲ್ಲಿ ಯಾವುದೇಲ್ಲಾ ದಾಖಲಾತಿಗಳನ್ನು ಪಡೆದಿರುತ್ತೀರಾ ಮತ್ತು ಯಾವ ಯಾವ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಯಾವುದೇ ದಾಖಲಾತಿಯನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದು ನುಡಿದು ಸಾಕ್ಷಿಯು ನಮ್ಮ ವಕೀಲರು ಪರಿಶೀಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಜಮೀನನ್ನು ಖರೀದಿಸುವ ಸಮಯ 30-40 ವರ್ಷಗಳ ಹಿಂದಿನ ಎಲ್ಲಾ ಮೂಲ ದಾಖಾತಿಗಳನ್ನು ಪರಿಶೀಲಿಸಿ ಖರೀದಿಸಲಾಗುತ್ತದೆ ಎಂದರೆ ಸರಿ. ಐಟಂ ನಂ.1 ದಾವಾಸ್ತಿಗೆ ಸಂಬಂಧಿಸಿದಂತೆ 30-40 ವರ್ಷಗಳ ಹಿಂದಿನ ಎಲ್ಲಾ ಮೂಲ ದಾಖಾತಿಗಳನ್ನು ಪರಿಶೀಲಿಸಿರುತ್ತೇನೆ. ನನಗೆ ಸದರಿ ಆಸ್ತಿಯನ್ನು ಮಾರಾಟ ಮಾಡಿದ ಮಾರಾಟ ಗಾರರಿಗೆ ಸಂಬಂಧಿಸಿದಂತೆ ವಂಶವೃಕ್ಷವನ್ನು ನಾನು ಪಡೆದಕೊಂಡಿರುವುದಿಲ್ಲ. ಸದರಿ ವಂಶವೃಕ್ಷವನ್ನು ಪಡೆದುಕೊಳ್ಳಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿಯ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 10 ನಂಜಮ್ಮ ನವರ ಶೇಖರಪ್ಪ ಉ.ಶಂಕ್ರಪ್ಪ ರವರ ಮಕ್ಕಳ ವಂಶವೃಕ್ಷವನ್ನು ನೀವು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನನ್ನ ಮಾರಾಟಗಾರರಾದ ನಂಜಮ್ಮ ನವರ ವಂಶವೃಕ್ಷವನ್ನು ನಾನು ಪಡೆದುಕೊಂಡಿರುತ್ತೇನೆ. ಸಾಕ್ಷಿಗೆ ಅವರೇ ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಿ ಸದರಿ ನಂಜಮ್ಮ ನವರ ವಂಶವೃಕ್ಷ ವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಪರಿಶೀಲೀಸಿ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆಸ್ತಿಯನ್ನು ಕೊಂಡು ಕೊಳ್ಳುವ ಸಮಯದಲ್ಲಿ ಆಸ್ತಿಗೆ ಸಂಬಂದಿಪಟ್ಟಂತೆ ದಿನಪತ್ರಿಕೆಯಲ್ಲಿ

ಖರೀದಿಸುವ ಬಗ್ಗೆ ಸಾರ್ವಜನಿಕ ಪ್ರಕಟಣೆಯನ್ನು ತೆಗೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಪತ್ರಿಕಾ ಪ್ರಕಟಣೆ ತೆಗೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಸದರಿ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಎಲ್ಲಾ ದಾಖಲಾತಿಗಳನ್ನು ನೋಡಿರುತ್ತೇನೆ ಎಂದು ಸುಳ್ಳು ನುಡಿದಿರುತ್ತೇನೆ ಮತ್ತು ಅವುಗಳನ್ನು ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು 10 ರಿಂದ 21 ರ ಪ್ರತಿವಾದಿಗಳು ಶಾಮೀಲಾಗಿ ಸುಳ್ಳು ದಿ.25.02.2021 ರಂದು ಕ್ರಯಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಅವರೇ ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಲಾಗಿ ಸಾಕ್ಷಿಗೆ ಅದನ್ನು ಪರಿಶೀಲಿಸಿ ಆ ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ಮೂಲ ಶೇಖರಪ್ಪ ಉ. ಶಂಕ್ರಪ್ಪ ರವರ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯು ಈಗಲೂ ಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ವಾದಿಗಳ ಪಿತ್ರಾರ್ಜಿತ ಅಸ್ತಿಗಳಾಗಿರುತ್ತವೆ ಎಂದರೆ ಸರಿ. ವಾದಿಗಳಿಗೆ ಪಿತ್ರಾರ್ಜಿತವಾಗಿ ಆಸ್ತಿಗಳು ಬಂದಿರುವುದರಿಂದ ಅವರಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿ. ವಾದಿಗಳು ದಾವಾಸ್ತಿಗಳಿಗೆ ಸಂಬಂಧಿಸಿದಂತೆ 1/3 ರಂತೆ ಹಕ್ಕುದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 23 ರವರು ರಮೇಶ್ ರವರು ನನಗೆ ಸಂಬಂಧಿಕರಲ್ಲ. ಈ ದಿನ ನಾನು ನನ್ನ ಪರವಾಗಿ ಮಾತ್ರ ಸಾಕ್ಷಿ ನುಡಿಯುತ್ತಿದ್ದೇನೆ. ಪ್ರತಿವಾದಿ 23 ರಮೇಶ್ ರವರು ಆಸ್ತಿ ಖರೀದಿಸಿದ್ದ ಬಗ್ಗೆ ಅವರೇ ತಿಳಿಸಿದ್ದರಿಂದ ನನಗೆ ತಿಳಿದುಬಂದಿರುತ್ತದೆ. ಪ್ರತಿವಾದಿ 5 ರಿಂದ 7 ಮತ್ತು 10 ರಿಂದ 21 ಮತ್ತು 23 ರವರೆಲ್ಲಾ ಸೇರಿ ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀಸವಾಲಿಗೆ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ